ಕರ್ನಾಟಕ ಸರ್ಕಾರ
ಜಂಟಿ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ,
ಬೆಂಗಳೂರು-02
ದೂ.ಸಂ:22242943,
ಫ್ಯಾಕ್ಸ್ :22271998,
ಇ-ಮೇಲ್: jd_mms@yahoo.co.in

ಸಂಖ್ಯೆ:ಎಂ:3/ಅ.ದಾ/ಬರಪೀಡಿತ ಪ್ರ.ಬಿ.ಶಾಲೆಗಳಿಗೆ ಬಿ.ಯೋ/22/15-16 ದಿನಾಂಕ:21-04-2016

## ಜ್ಞಾಪನ

ವಿಷಯ : ಬರಪೀಡಿತ ಪ್ರದೇಶಗಳಲ್ಲಿ ಬಿಸಿಯೂಟ ಕಾರ್ಯಕ್ರಮದ ಅನುಷ್ಠಾನವನ್ನು ಎಸ್.ಎಂ.ಎಸ್ ಆಧಾರಿತ ತಂತ್ರಾಂಶದ ಮೂಲಕ ಮೇಲ್ವಿಚಾರಣೆ ನಡೆಸುತ್ತಿದ್ದು, ಪ್ರಗತಿ ಕುಂಠಿತವಾಗಿರುವ ಬಗ್ಗೆ.

ಉಲ್ಲೇಖ :
1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪ್ರಾ&ಪ್ರೌ ಶಿಕ್ಷಣ) ರವರ ಅಧ್ಯಕ್ಷತೆಯಲ್ಲಿ ಬೇಸಿಗೆ ರಜಾ ಅವಧಿಯಲ್ಲಿ ಬಿಸಿಯೂಟ ನೀಡಲು ನಡೆದ ಸಭೆಯ ನಡವಳಿ ದಿನಾಂಕ : 03-03-2016.
2. ದಿನಾಂಕ : 07-04-2016 ರಂದು ನಡೆದ ಟೆಲಿಕಾನ್ಫರೆನ್ಸ್‌ನಲ್ಲಿ ನೀಡಿದ ತರಬೇತಿಯನ್ವಯ.
3. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ : 15-04-2016.

* * * * *

ಮಧ್ಯಾಹ್ನ ಉಪಹಾರ ಯೋಜನೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ರಾಜ್ಯಾದ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಸುಪ್ರೀಂಕೋರ್ಟ್‌ನ ನಿರ್ದೇಶನದನ್ವಯ ಬರಪೀಡಿತ ಪ್ರದೇಶಗಳಲ್ಲಿ ಬೇಸಿಗೆ ರಜಾ ಅವಧಿಯಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ಮುಂದುವರಸಲಾಗುತ್ತಿದೆ.

ಉಲ್ಲೇಖ-1 ರ ಸಭೆಯಲ್ಲಿ ಚರ್ಚಿಸಿದಂತೆ ಸದರಿ ಕಾರ್ಯಕ್ರಮವನ್ನು ಎಸ್.ಎಂ.ಎಸ್ ಆಧಾರಿತ ತಂತ್ರಾಂಶದ ಮೂಲಕ ಮೇಲ್ವಿಚಾರಣೆಯನ್ನು ನಡೆಸಲಾಗುತ್ತಿದ್ದು, ದಿನಾಂಕ : 07-04-2016 ರಂದು ಟೆಲಿಕಾನ್ಫರೆನ್ಸ್‌ನ ಮೂಲಕ ತರಬೇತಿಯನ್ನು ನೀಡಲಾಗಿದೆ ಹಾಗೂ ಎಸ್.ಎಂ.ಎಸ್ ಗಳನ್ನು ಸರಿಯಾಗಿ ಕಳುಹಿಸದಿರುವುದನ್ನು ಮೇಲ್ವಿಚಾರಣೆ ಮಾಡುವ ಬಗ್ಗೆ ಎನ್.ಐ.ಸಿ ರವರು ಸಿದ್ಧಪಡಿಸಿರುವ ಸಾಫ್ಟ್‌ವೇರ್‌ನಲ್ಲಿ Reports ಪಡೆದು ಶಿಕ್ಷಕರಿಗೆ ಮಾರ್ಗದರ್ಶನ ನೀಡುವ ಬಗ್ಗೆ ಉಲ್ಲೇಖ-3 ರ ಪತ್ರದಲ್ಲಿ ತಿಳಿಸಲಾಗಿರುತ್ತದೆ.

ಈ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಪ್ರತಿ ದಿನವೂ ಸಹ ಮೇಲ್ವಿಚಾರಣೆ ನಡೆಸುತ್ತಿದ್ದು, ಪ್ರಗತಿಯನ್ನು ಪರಿಶೀಲಿಸಿದಾಗ ಕೆಲವು ಶಾಲೆಗಳಿಂದ ಮಾಹಿತಿಗಳು ತಪ್ಪಾಗಿ ನಮೂದಾಗುತ್ತಿರುವುದು ಹಾಗೂ ಇನ್ನು ಕೆಲವು ಶಾಲೆಗಳಿಂದ ಇದುವರೆವಿಗೂ ಎಸ್.ಎಂ.ಎಸ್ ಗಳನ್ನು ಕಳುಹಿಸದೇ ಇರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪ್ರಾ & ಪ್ರೌ ಶಿಕ್ಷಣ) ಮತ್ತು ಮಾನ್ಯ ಆಯುಕ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ತಕ್ಷಣವೇ ಸಂಬಂಧಿಸಿದ ಜಿಲ್ಲೆಗಳ ಶಿಕ್ಷಣಾಧಿಕಾರಿಗಳು(ಅದಾ) ಜಿಲ್ಲಾ ಪಂಚಾಯತ್ ಕಛೇರಿ, ಮತ್ತು ಸಹಾಯಕ ನಿರ್ದೇಶಕರು(ಅದಾ) ತಾಲ್ಲೂಕು ಪಂಚಾಯತ್ ಕಛೇರಿ ರವರುಗಳು ತಮ್ಮ ವ್ಯಾಪ್ತಿಯ ಶಾಲೆಗಳಲ್ಲಿ ಬಿಸಿಯೂಟ ಯೋಜನೆಯ ಅನುಷ್ಠಾನದ ಬಗ್ಗೆ ಸೂಚಿಸಿರುವ ದೂರವಾಣಿ ಸಂಖ್ಯೆಗೆ ಈ ಕೆಳಕಂಡಂತಿರುತ್ತದೆ.

| | |
|---|---|
| ಬೆಂಗಳೂರು ಮತ್ತು ಮೈಸೂರು ವಿಭಾಗದ ಬರ ಪೀಡಿತ ತಾಲ್ಲೂಕುಗಳ ಮುಖ್ಯ ಶಿಕ್ಷಕರು ಎಸ್.ಎಂ.ಎಸ್ ಮಾಡಬೇಕಾದ ದೂರವಾಣಿ ಸಂಖ್ಯೆ | **9480835700** |
| ಗುಲ್ಬರ್ಗ ಮತ್ತು ಬೆಳಗಾಂ ವಿಭಾಗದ ಬರ ಪೀಡಿತ ತಾಲ್ಲೂಕುಗಳ ಮುಖ್ಯ ಶಿಕ್ಷಕರು ಎಸ್.ಎಂ.ಎಸ್ ಮಾಡಬೇಕಾದ ದೂರವಾಣಿ ಸಂಖ್ಯೆ | **9480835701** |

ಸರಿಯಾದ ಕ್ರಮದ (dd/mm/yyyy,T,H,S1,S2 ಉದಾ : 21/04/2016,01,02,26,18) ಮೂಲಕ ಎಸ್.ಎಂ.ಎಸ್ ಕಳುಹಿಸಲು ಮುಖ್ಯ ಶಿಕ್ಷಕರಿಗೆ/ನೋಡಲ್ ಶಿಕ್ಷಕರಿಗೆ ಸೂಚನೆಯನ್ನು ನೀಡಲು ಮೇಲ್ವಿಚಾರಣೆ ಮಾಡುವುದು ಹಾಗೂ ಅಗತ್ಯ ಮಾರ್ಗದರ್ಶನ ಮಾಡುವುದು. ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಕೂಡಲೇ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

-----2

ವಿ.ಸೂ : **ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆಯಲು** sakala.gov.in/kamdm-dashboard **ನಲ್ಲಿ ವಿವಿಧ ಬಗೆಯ report ಗಳನ್ನು ಪಡೆಯಲು ಅವಕಾಶವಿದೆ.**

(ಬೆಳ್ಳಶೆಟ್ಟಿ)
ಜಂಟಿ ನಿರ್ದೇಶಕರು,
ಮಧ್ಯಾಹ್ನ ಉಪಹಾರ ಯೋಜನೆ.

**ರವರಿಗೆ**

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿ (ಬೆಂಗಳೂರು ನಗರ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಹೊರತುಪಡಿಸಿ).
2. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾ.ಶಿ.ಇಲಾಖೆ (ಬೆಂಗಳೂರು ನಗರ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಹೊರತುಪಡಿಸಿ).
3. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು(ಅದಾ), ಜಿಲ್ಲಾ ಪಂಚಾಯತ್ ಕಛೇರಿ, (ಬೆಂಗಳೂರು ನಗರ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಹೊರತುಪಡಿಸಿ).
4. ಬರಪೀಡಿತ ಪ್ರದೇಶಗಳೆಂದು ಘೋಷಿಸಿರುವ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ, (ಬೆಂಗಳೂರು ನಗರ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಹೊರತುಪಡಿಸಿ).
5. ಬರಪೀಡಿತ ಪ್ರದೇಶಗಳೆಂದು ಘೋಷಿಸಿರುವ ತಾಲ್ಲೂಕುಗಳ ಸಹಾಯಕ ನಿರ್ದೇಶಕರು(ಅದಾ), ತಾಲ್ಲೂಕು ಪಂಚಾಯತ್ ಕಛೇರಿ, (ಬೆಂಗಳೂರು ನಗರ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಹೊರತುಪಡಿಸಿ).

**ಪ್ರತಿಯನ್ನು ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ :**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪ್ರಾ & ಪ್ರೌ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.